ಆರ್ ಎ ನಂ. 38/2023
ಪಿ ಡಬ್ಲ್ಯು 1
ದಿನಾಂಕ 16/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಬಿ ಆರ್ ವಕೀಲರಿಂದಃ

1 ನೇ ಎದುರುದಾರರು ನನ್ನ, ಸಿದ್ದಪ್ಪ ಮತ್ತು ಲಲಿತಮ್ಮ ವಿರುದ್ದ ಸಲ್ಲಿಸಿದ್ದ ಓ ಎಸ್ ನಂ.92/2013 ರ ದಾವೆಯಲ್ಲಿ ಎಲ್ಲಾರ ಪರವಾಗಿ ನನ್ನನ್ನು ಮಾತ್ರ ವಿಚಾರಣೆ ಮಾಡಿದ್ದರು ಎಂದರೆ ಸಾಕ್ಷಿ ಎಲ್ಲಾರೂ ಸಹ ವೈಯುಕ್ತಿಕವಾಗಿ ಸಾಕ್ಷ್ಯ ವಿಚಾರಣೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಓ ಎಸ್ ನಂ.92/2013 ರ ದಾವೆಯನ್ನು ಪ್ರಸ್ತುತ ಮೇಲ್ಮನವಿಯಲ್ಲಿರುವ ಆಸ್ತಿಗೆ ಸಂಬಂದಪಟ್ಟಂತೆ ಹೂಡಲಾಗಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ಮೇಲ್ಮನವಿಯಲ್ಲಿರುವಂತಹ ಜಮೀನಿನ ಸರ್ವೆ ನಂ.205 ಆಗಿರುತ್ತದೆ. ಅದು 6 ಎಕರೆ 5 ಗುಂಟೆ ಇರುತ್ತದೆ. ನಾನು 3 ಎಕರೆ 4 ಗುಂಟೆ ವಿಸ್ತೀರ್ಣದ ಸ್ವತ್ತಿನ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತೇನ. ಸದರಿ ಮೇಲ್ಮನವಿಯನ್ನು ಯಾರ ವಿರುದ್ದ ಹೂಡಲಾಗಿದೆ ಎಂದರೆ ಸಾಕ್ಷಿ 1 ನೇ ಎದುರುದಾರರ ಮೇಲೆ ಎಂದು ನುಡಿಯುತ್ತಾರೆ. ಅವರನ್ನು ಹೊರತು ಪಡಿಸಿ ಬೇರೆಯವರ ಮೇಲೆ ಸಲ್ಲಿಸಿಲ್ಲವೇ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ಮುದ್ದತಿನಲ್ಲಿ ನಾನು ಮತ್ತು ಲಲಿತಮ್ಮ ಹಾಗೂ ಇತರರು ಹಾಜರಾಗುತ್ತಿದ್ದೇವು ಎಂದರೆ ಸರಿ. ಪ್ರತಿ ಮುದ್ದತ್ತಿನಲ್ಲೂ ನಮ್ಮ

ವಕೀಲರು ತುಮಕೂರಿನಿಂದ ಬರುತ್ತಿದ್ದರು ಎಂದರೆ ಸರಿ. ತೀರ್ಪು ಆದ ದಿನ ನಾನು ಮತ್ತು ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿದ್ದೇವು ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ತೀರ್ಪು ಆದ ದಿನ ಲಲಿತಮ್ಮ ಮತ್ತು ನೀಲಮ್ಮರವರು ಬಂದಿದ್ದರಾ ಎಂದರೆ ಸಾಕ್ಷಿ ಅವರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ನನಗೆ ಅನಾರೋಗ್ಯ ಇದ್ದ ಕಾರಣ ನಾನು ಬಂದಿಲ್ಲ ಎಂದು ನುಡಿಯುತ್ತಾರೆ. ವಕೀಲರು ಆ ದಿನ ಹಾಜರಾದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನಾನು ನ್ಯಾಯಾಲಯಕ್ಕೆ ಹಾಜರಾಗದೆ ಇದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ದಾವೆಯ ತೀರ್ಪು ಮತ್ತು ಲಲಿತಮ್ಮ ಮತ್ತು ನೀಲಮ್ಮರವರು ಸಲ್ಲಿಸಿದ ದಾವೆಗಳ ತೀರ್ಪು ಒಂದೇ ದಿನ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಮ್ಮ ಮೂರು ಜನರ ದಾವೆಯನ್ನು ತುಮಕೂರಿನ ವಕೀಲರು ಒಬ್ಬರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಲಲಿತಮ್ಮ ಮತ್ತು ನೀಲಮ್ಮರವರು ನಮ್ಮ ಊರಿನವರೇ ಎಂದರೆ ಸರಿ. ನಾವು ಪ್ರತಿದಿನ ಬೇಟಿಯಾಗುತ್ತಿದ್ದೇವು ಎಂದರೆ ಸರಿಯಲ್ಲ. ವಿಚಾರಣಾ ನ್ಯಾಯಾಲಯದಲ್ಲಿ ತೀರ್ಪಾದ ಎಷ್ಟು ದಿನಗಳ ನಂತರ ಗೊತ್ತಾಯಿತು ಎಂದರೆ ಸಾಕ್ಷಿ 4 ತಿಂಗಳ ನಂತರ ಎಂದು ನುಡಿಯುತ್ತಾರೆ. ಆ ರೀತಿ 4 ತಿಂಗಳ ನಂತರ ತೀರ್ಪಿನ ವಿಚಾರ ಹೇಗೆ ತಿಳಿದು ಬಂತು ಎಂದರೆ ಸಾಕ್ಷಿ ನಾನೇ ಖುದ್ದು ತುಮಕೂರಿನ ವಕೀಲರ ಬಳಿ ಹೋಗಿದ್ದು ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಜತೆ ನೀಲಮ್ಮ ಮತ್ತು ಲಲಿತಮ್ಮರವರ ಸಹ ಬಂದಿದ್ದರು. ಆ ರೀತಿ

ತುಮಕೂರಿನ ವಕೀಲರನ್ನು ತುಮಕೂರಿನಲ್ಲಿ ಬೇಟಿ ಮಾಡಿದ ನಂತರ ತೀರ್ಪಿನ ವಿಚಾರವನ್ನು ನಮಗೆ ತಿಳಿಸಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ವಕೀಲರನ್ನು ಬೇಟಿ ಮಾಡಿದ ನಂತರದಲ್ಲಿ ಅವರು ಕಡೂರು ನ್ಯಾಯಾಲಯದಿಂದ ತೀರ್ಪಿನ ಪ್ರತಿ ಪಡೆದಿರುತ್ತಾರೆ. ಆ ರೀತಿ ತುಮಕೂರಿನ ವಕೀಲರನ್ನು ಬೇಟಿ ಮಾಡಿದ 2-3 ದಿನಗಳಲ್ಲಿ ಕಡೂರಿನಲ್ಲಿ ತೀರ್ಪಿನ ಪ್ರತಿಯನ್ನು ವಕೀಲರು ಪಡೆದಿರುತ್ತಾರೆ. ನಮ್ಮ ವಕೀಲರೇ ತೀರ್ಪಿನ ಪ್ರತಿಯನ್ನು ಪಡೆದು ಮೇಲ್ಮನವಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತೀರ್ಪಿನ ಪ್ರತಿ ಪಡೆದ ಎಷ್ಟು ದಿನದಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದರೆ ಸಾಕ್ಷಿ 2 ದಿನಗಳಲ್ಲಿ ಇರಬಹುದು ಎಂದು ನುಡಿಯುತ್ತಾರೆ. ತುಮಕೂರಿನ ವಕೀಲರನ್ನು ಬೇಟಿ ಮಾಡಿರುವುದನ್ನು ಹೊರತು ಪಡಿಸಿ ಪ್ರಸ್ತುತ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಇತರೇ ವಕೀಲರನ್ನು ಬೇಟಿ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ತಿಳಿದುಕೊಂಡೆ ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನಾ ಎಂದರೆ ಸಾಕ್ಷಿ ನಾನ್ಯಾಕೆ ಹೇಳಲಿ ನನ್ನ ವಕೀಲರು ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ಮೇಲ್ಮನವಿಯನ್ನು ಯಾವ ಕಾರಣಕ್ಕೆ ತಡವಾಗಿ ಸಲ್ಲಿಸಲಾಗಿದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ದಿನಗಳ ತಡವಾಗಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ನನ್ನ

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿ 4 ತಿಂಗಳಿಗಿಂತ ಹೆಚ್ಚು ದಿನಗಳು ಎಂದು ನುಡಿಯುತ್ತಾರೆ. ಆದರೆ ನಿಖರವಾಗಿ ಎಷ್ಟು ದಿನಗಳ ಎಂದು ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವ ಕಾರಣಕ್ಕಾಗಿ ಮೇಲ್ಮನವಿಯನ್ನು ತಡವಾಗಿ ಸಲ್ಲಿಸಲಾಗಿದೆ ಎಂದು ಬರೆಯಲಾಗಿದೆ ಎಂದು ಗೊತ್ತಿಲ್ಲದೆ ಇದ್ದರೂ ಸಹ ನನ್ನ ವಿಚಾರಣಾ ಪ್ರಮಾಣ ಪತ್ರದಲ್ಲೆ ಬೇರೆ ವಿಚಾರಗಳು ಮತ್ತು ಅರ್ಜಿಯಲ್ಲೆ ಬೇರೆ ವಿಚಾರಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಇಲ್ಲದೆ ಇರುವ ಕಾರಣದಿಂದಲೇ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಂದು ವಿಚಾರ ನನ್ನ ಸಾಕ್ಷ್ಯದಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಯಾವುದೇ ಸಕಾರಣ ಇಲ್ಲದೆ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲ್ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಯಾವುದೇ ಸಕಾರಣ ಮತ್ತು ದಾಖಲೆ ಇಲ್ಲದೆ ಇರುವುದರಿಂದ ನನಗೆ ಪ್ರಸ್ತುತ ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.